# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 131 | Pages. 2 | Date: 26-04-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 131 – ಪುಟಗಳು : 2 | 26-04-2026 | ಭಾನುವಾರ | Ph: 8762954248 | ದರ : ₹1


# ಉದ್ಯೋಗ ಮೀಸಲಾತಿ ಅಡೆತಡೆ ನಿವಾರಣೆ


## 56,000 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲು ಸರ್ಕಾರ ಸಜ್ಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಅನುಸೂಚಿತ ಜಾತಿಗಳಿಗೆ 15 ಶೇಕಡಾ ಆಂತರಿಕ ಮೀಸಲಾತಿ ಜಾರಿಗೆ ತರಲು ಸರ್ಕಾರ ಕೈಗೊಂಡ ತೀರ್ಮಾನದೊಂದಿಗೆ, 56,432 ಇಲಾಖಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಪ್ರಮುಖ ಅಡೆತಡೆಯನ್ನು ಶುಕ್ರವಾರ ಸರ್ಕಾರ ದಾಟಿದೆ. ನೇಮಕಾತಿಯಲ್ಲಿ ವಿಳಂಬವಾಗಿರುವುದಕ್ಕೆ ವಿರೋಧವಾಗಿ ಕೆಲವು ಸಮಯ ಹಿಂದೆ ಧಾರವಾಡದಲ್ಲಿ ಪ್ರತಿಭಟನೆ ನಡೆಸಿದ ಯುವಕರಿಗೆ ಇದು ಆಶಾಕಿರಣವಾಗಿದೆ.

ಖಾಸಗಿ ವಲಯದಲ್ಲಿ ಕೃತಕ ಬುದ್ಧಿಮತ್ತೆ ಸೇರಿದಂತೆ ವಿವಿಧ ಕಾರಣಗಳಿಂದ ಉದ್ಯೋಗ ಅವಕಾಶಗಳು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ, ವಿಶೇಷವಾಗಿ ಗ್ರಾಮೀಣ ಪ್ರದೇಶದ ಯುವಕರು ಸುರಕ್ಷಿತ ಸರ್ಕಾರಿ ಉದ್ಯೋಗಗಳತ್ತ ಮುಖ ಮಾಡಿದ್ದಾರೆ. ಇದೇ ಸಮಯದಲ್ಲಿ ಸರ್ಕಾರ ಮೀಸಲಾತಿ ಗೊಂದಲದಲ್ಲಿ ಸಿಲುಕಿತ್ತು.

ಬಜೆಟ್‌ನಲ್ಲಿ ಘೋಷಿಸಿದಂತೆ,



ನಾವು ತಕ್ಷಣವೇ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸುತ್ತಿದ್ದೇವೆ. 6 ಶೇಕಡಾ ಹುದ್ದೆಗಳನ್ನು ಬ್ಯಾಕ್‌ಲಾಗ್ ಆಗಿ ಉಳಿಸಿಕೊಂಡು, ನಾಳೆಯೇ ಅಧಿಸೂಚನೆ ಹೊರಡಿಸುತ್ತೇವೆ ಎಂದು ಸಚಿವ ಸಂಪುಟ ಸಭೆಯ ನಂತರ ಸಿದ್ದರಾಮಯ್ಯ ನಿನ್ನೆ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದರು. ಮುಂದಿನ ಕೆಲವು ವರ್ಷಗಳಲ್ಲಿ ಹಂತ ಹಂತವಾಗಿ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಅವರು ಹೇಳಿದರು.

ಕೋರ್ಟ್ ಆದೇಶದ ಪ್ರಕಾರ ಒಟ್ಟು ಮೀಸಲಾತಿ 50 ಶೇಕಡಾ ಮೀರಬಾರದು ಎಂಬುದರಿಂದ, 15 ಶೇಕಡಾ ಎಸ್ ಸಿ ಮೀಸಲಾತಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆ ಶೀಘ್ರದಲ್ಲೇ ಆರಂಭವಾಗಲಿದೆ ಮತ್ತು ಅಧಿಸೂಚನೆ ಹೊರಡಿಸಲಾಗುವುದು ಎಂದು ಅವರು ಹೇಳಿದರು.

ಹೈಕೋರ್ಟ್ ಅಂತಿಮ ತೀರ್ಪು ನೀಡುವವರೆಗೆ ನೇಮಕಾತಿ 50 ಶೇಕಡಾ ಮೀಸಲಾತಿಯೊಳಗೆ ನಡೆಯಲಿದೆ. ನಮ್ಮ ಸರ್ಕಾರ 56 ಶೇಕಡಾ ಮೀಸಲಾತಿ ನೀಡುವ ಬದ್ಧತೆಯನ್ನು ಹೊಂದಿದೆ ಎಂದು ಹೇಳಿದರು.

ಪರಿಶಿಷ್ಟ ಜಾತಿಗಳಿಗೆ 15ರಿಂದ 17 ಶೇಕಡಾಕ್ಕೆ 2 ಶೇಕಡಾ ಹೆಚ್ಚಳ ಹಾಗೂ ಎಸ್ ಟಿಗಳಿಗೆ 3ರಿಂದ 7 ಶೇಕಡಾಕ್ಕೆ 4 ಶೇಕಡಾ ಹೆಚ್ಚಳವನ್ನು ತಾತ್ಕಾಲಿಕವಾಗಿ 6 ಶೇಕಡಾ ಬ್ಯಾಕ್‌ಲಾಗ್ ಎಂದು ಪರಿಗಣಿಸಲಾಗುವುದು ಎಂದರು.

ನ್ಯಾಯಾಲಯದ ತೀರ್ಪು ಸರ್ಕಾರದ ಪರವಾಗಿ ಬಂದರೆ, ಎಸ್ ಸಿ ವರ್ಗದವರಿಗೆ 17 ಶೇಕಡಾ ಮತ್ತು ಎಸ್ ಟಿ ವರ್ಗದವರಿಗೆ 7 ಶೇಕಡಾ ಸೇರಿ ಒಟ್ಟು 24 ಶೇಕಡಾ ಮೀಸಲಾತಿ ನೀಡುವಲ್ಲಿ ಸರ್ಕಾರ ಬದ್ಧವಾಗಿದೆ. ಆವರೆಗೆ, ಸಚಿವ ಸಂಪುಟದಲ್ಲಿ ಮೊದಲು ತೀರ್ಮಾನಿಸಿದ 6:6:5 ಆಂತರಿಕ ಮೀಸಲಾತಿ ಅನುಪಾತದ ಪ್ರಕಾರ 6 ಶೇಕಡಾವನ್ನು ಬ್ಯಾಕ್‌ಲಾಗ್ ಆಗಿ ಇಡಲಾಗುತ್ತದೆ ಎಂದು ಭರವಸೆ ನೀಡಿದರು.

ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕಸದಸ್ಯ ಆಯೋಗ ರಚಿಸಲಾಗಿದ್ದು, ಅವರು ಆಂತರಿಕ ಮೀಸಲಾತಿ ನೀಡುವಂತೆ ಶಿಫಾರಸು ಮಾಡಿದ್ದರು. ಅದರಂತೆ ಎಸ್ ಸಿ ಎಡ, ಎಸ್ ಸಿ ಬಲ ಮತ್ತು ಭೋವಿ, ಲಂಬಾಣಿ, ಕೊರಚ, ಕೊರಮ ಹಾಗೂ ಇತರ ವಲಸೆ ಜಾತಿಗಳಿಗೆ ಕ್ರಮವಾಗಿ 6:6:5 ಅನುಪಾತದಲ್ಲಿ ಆಂತರಿಕ ಮೀಸಲಾತಿ ನೀಡಲು ಸರ್ಕಾರ ತೀರ್ಮಾನಿಸಿತು.

ಇದರಿಂದ ಪರಿಶಿಷ್ಟ ಜಾತಿಗಳಿಗೆ 17 ಶೇಕಡಾ ಮತ್ತು ಎಸ್ ಟಿಗಳಿಗೆ 7 ಶೇಕಡಾ ಸೇರಿ ಒಟ್ಟು 24 ಶೇಕಡಾ ಮೀಸಲಾತಿ ನೀಡಲಾಗಿದೆ. ಒಟ್ಟಾರೆ 56 ಶೇಕಡಾ ಮೀಸಲಾತಿ ನೀಡಲಾಗಿದೆ ಎಂದು ಅವರು ವಿವರಿಸಿದರು. ಆದರೆ, ಇಂಡ್ರಾ ಸಾವ್ನೇ ವಿರುದ್ಧ ಯೂನಿಯನ್ ಆಫ್ ಇಂಡಿಯಾ (1992) ಪ್ರಕರಣವನ್ನು ಉಲ್ಲೇಖಿಸಿ, ಒಟ್ಟು ಮೀಸಲಾತಿ 50 ಶೇಕಡಾ ಮೀರಬಾರದು ಎಂದು ನ್ಯಾಯಾಲಯ ಪುನರುಚ್ಚರಿಸಿದೆ ಎಂದು ಅವರು ಹೇಳಿದರು.

2023ರ ವಿಧಾನಸಭೆ ಚುನಾವಣೆಗೆ ಮುನ್ನ ಚಿತ್ರದುರ್ಗದಲ್ಲಿ ನಡೆದ ಸಭೆಯಲ್ಲಿ ಅನುಸೂಚಿತ ಜಾತಿಯ 101 ಜಾತಿಗಳಿಗೆ ನೀಡಿದ ಭರವಸೆಯನ್ನು ಕಾಂಗ್ರೆಸ್ ಸರ್ಕಾರ ಈ ಮೂಲಕ ಈಡೇರಿಸಿದೆ ಎಂದು ಅವರು ತಿಳಿಸಿದರು.

# ಪಠ್ಯ ಪುಸ್ತಕ ಜೊತೆಗೆ ಸಾಹಿತ್ಯ ಅಧ್ಯಯನ ಮಾಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜೀವನದಲ್ಲಿ ತಾಳ್ಮೆ, ಮಾನವೀಯತೆ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಸಾಹಿತ್ಯ ಓದು ನೆರವಾಗುತ್ತದೆ ಎಂದು ನಿವೃತ್ತ ಮುಖ್ಯ ಅರಣ್ಯ ಅಧಿಕಾರಿ ಯತೀಶ್ ಕುಮಾರ್ ಅಭಿಪ್ರಾಯಪಟ್ಟರು.

ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ಏರ್ಪಡಿಸಿದ್ದ ಮುಕ್ತ ಸಂವಾದ ಕಾರ್ಯಕ್ರಮದಲ್ಲಿ ಮಾತಾನಾಡಿದ ಅವರು, ವಿದ್ಯಾರ್ಥಿಗಳು ಪಠ್ಯ ಪುಸ್ತಕ ಅಧ್ಯಯನ ಜೊತೆಗೆ ಸಾಹಿತ್ಯ, ಪ್ರಚಲಿತ ವಿದ್ಯಮಾನಗಳ ಕುರಿತು ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಮಾತನಾಡಿ, ಅರಣ್ಯ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳಾಗಿ ಕೆಲಸ ಮಾಡಿ ಜೊತೆಗೆ ಹಲವಾರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪುಸ್ತಕಗಳನ್ನು ಯತೀಶ್ ಕುಮಾರ್ ಬರೆದಿದ್ದಾರೆ.



ಅವರ ಆಡಳಿತ ಅನುಭವ ಮತ್ತು ಸಾಮಾಜಿಕ ಜೀವನ ಎಲ್ಲರಿಗೂ ಮಾದರಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಮಾತನಾಡಿ, ಯತೀಶ್ ಕುಮಾರ್ ಇಂಜಿನಿಯರ್ ಪದವಿಯನ್ನು ಪಡೆದು ಅರಣ್ಯ ಇಲಾಖೆಯಲ್ಲಿ ಹಲವಾರು ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಅವರು ಪರಿಸರ ಜಾಗೃತಿ ಹಾಗೂಸಾಮಾಜಿಕ ಕಾರ್ಯಗಳಲ್ಲಿ ತಮ್ಮದೇಯಾದ ಛಾಪು ಮೂಡಿಸಿದ್ದಾರೆ ಎಂದರು.

ಪ್ರಾಂಶುಪಾಲ ಡಾ. ಹೆಚ್.ಜೆ.ಅಮರೇಂದ್ರ ಮಾತನಾಡಿದರು.

ಪ್ರಾಧ್ಯಾಪಕಿ ಡಾ.ಬಿ.ಉಮಾ, ಶಿಕ್ಷಣ ಸಂಸ್ಥೆಯ ಖಜಾಂಚಿ ಹೆಚ್.ಡಿ.ಪಾರ್ಶ್ವನಾಥ್, ಅಭಿವೃದ್ಧಿ ಅಧಿಕಾರಿ ಡಾ. ಇಂದ್ರ ಬಹದ್ದೂರ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಸುಮನ್ ಜಯಪ್ರಕಾಶ್ ಮತ್ತಿತರರಿದದರು.

# ತಣ್ಣೀರುಹಳ್ಳ ಮಠದಲ್ಲಿ 68 ವಟುಗಳಿಗೆ ಲಿಂಗ ದೀಕ್ಷೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ತಣ್ಣೀರುಹಳ್ಳ ಮಠದಲ್ಲಿ 68 ದೀಕ್ಷಾ ವಟುಗಳಿಗೆ ನುಗ್ಗೇಹಳ್ಳಿ ಪುರ ಮಠದ ಶ್ರೀ ಮಹೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಲಿಂಗ ದೀಕ್ಷೆ ನೆರವೇರಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಲಿಂಗ ಧಾರಣೆ ಕಾರ್ಯಕ್ರಮದಲ್ಲಿ ವೀರಶೈವ ಲಿಂಗಾಯತ ಮಹಾ ವೇದಿಕೆಯೂ ಸಮಾಜದ ಅಭಿವೃದ್ಧಿ ಹಾಗೂ ಜನಜಾಗೃತಿ ಮೂಡಿಸುವ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಬೇಕು ಎಂದರು. ಲಿಂಗ, ವಿಭೂತಿ , ರುದ್ರಾಕ್ಷಿ ಧಾರಣೆ, ಇಷ್ಟಲಿಂಗ ಪೂಜೆ ಮೂಲಕ ಸಮಾಜದಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಹಾ ವೇದಿಕೆ ಮಾಡುತ್ತಿದೆ. ಏ. 26ರಂದು ನಡೆಯುವ ವಿಶ್ವಗುರು ಬಸವೇಶ್ವರರ 896ನೇ ಜಯಂತಿ, ತ್ರಿವಿಧ ದಾಸೋಹಿ ಡಾ. ಶ್ರೀ ಶಿವಕುಮಾರ ಸ್ವಾಮೀಜಿ 119ನೇ ಜಯಂತಿ ಹಾಗು ಶ್ರೀ ಶಿವಲಿಂಗ ಸ್ವಾಮೀಜಿ ಅವರ 92ನೇ ಜಯಂತ್ಯೋತ್ಸವ, ನಿರಂಜನ ನಿರಾಭಾರಿ ಜಂಗಮ ಪಟ್ಟಾಧಿಕಾರದ 56ನೇ ಮಾಸ ಕಾರ್ಯಕ್ರಮ, ಶ್ರೀ ಶಿವಲಿಂಗ ಸ್ವಾಮೀಜಿ ದಾಸೋಹ ಭವನ ಉದ್ಘಾಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ವಿಶ್ವ ವೀರಶೈವ ಲಿಂಗಾಯತ ಮಹಾ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ರಾಜಾಪುರ ಮಠದ ನಟರಾಜ್, ರಾಜ್ಯಾಧ್ಯಕ್ಷ ಎಂ.ಎನ್.ಕುಮಾರಸ್ವಾಮಿ ಅವರು ಕಳೆದ 15 ವರ್ಷಗಳಿಂದ 27 ಸಾವಿರ ದೀಕ್ಷಾ ವಟುಗಳಿಗೆ ಇಷ್ಟಲಿಂಗ ಪೂಜೆ, ಲಿಂಗ ಧಾರಣೆ ಮತ್ತು ಧಾರ್ಮಿಕ ಕಾರ್ಯ ಮಾಡಿಕೊಂಡು ಬಂದಿದ್ದಾರೆ. ಅಲ್ಲದೆ ತಮಿಳುನಾಡು, ಕೇರಳ ಹಾಗೂ ಹೊರ ರಾಜ್ಯಗಳಲ್ಲಿ ಜನ ಜಾಗೃತಿ, ಲಿಂಗಧಾರಣೆ ಮಾಡಿಕೊಂಡು ಬರುತ್ತಿರುವುದು ಶ್ಲಾಘನೀಯ ಎಂದರು.

# ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಚಾಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆ ವತಿಯಿಂದ ಇದೇ ಮೊದಲ ಬಾರಿಗೆ ನಗರದಲ್ಲಿ ರಾಜ್ಯ ಮಟ್ಟದ ಮುಕ್ತ ಹಾಗೂ ಬಾಲಕ-ಬಾಲಕಿಯರ ಸಬ್ ಜೂನಿಯರ್ ಕ್ಲಾಸಿಕ್ ಮತ್ತು ಎಕ್ಯುಪ್ಡ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನ್ನು ಅತ್ಯುತ್ತಮವಾಗಿ ಆಯೋಜಿಸಲಾಗಿದೆ ಎಂದು ಪವರ್ ಲಿಫ್ಟಿಂಗ್ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷ ಸತೀಶ್ ಕುಮಾರ್ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿರುವ 2 ದಿನಗಳ ರಾಜ್ಯ ಮಟ್ಟದ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆಯ ಸಂಸ್ಥಾಪಕ ಹಾಗೂ ಕಾರ್ಯದರ್ಶಿ ಕೆ. ಹನುಮಂತೇಗೌಡ ಮತ್ತು ಎಲ್ಲಾ ಪದಾಧಿಕಾರಿಗಳ ಶ್ರಮದಿಂದ ಈ ಮಟ್ಟದ ಸ್ಪರ್ಧೆ ಹಾಸನದಲ್ಲಿ ಸಾಧ್ಯವಾಗಿದೆ ಎಂದರು.

ಎರಡು ದಿನಗಳ ಕಾಲ ನಿರಂತರವಾಗಿ ನಡೆಯಲಿರುವ ಈ



ಚಾಂಪಿಯನ್‌ಶಿಪ್‌ನಲ್ಲಿ ಮೊದಲ ದಿನ ಕ್ಲಾಸಿಕ್ ವಿಭಾಗದ ಎಲ್ಲಾ ಸ್ಪರ್ಧೆಗಳು ನಡೆಯಲಿದ್ದು, ಭಾನುವಾರ ಎಕ್ಯುಪ್ಡ್ ಪವರ್‌ಲಿಫ್ಟಿಂಗ್ ಸ್ಪರ್ಧೆ ನಡೆಯಲಿವೆ ಎಂದು ತಿಳಿಸಿದರು. ಪವರ್ ಲಿಫ್ಟಿಂಗ್ ಇಂದು ವಿಶ್ವದ 156 ದೇಶಗಳಲ್ಲಿ ಮಾನ್ಯತೆ ಪಡೆದ ಕ್ರೀಡೆಯಾಗಿದೆ. ಈಗ ಎಲ್ಲ ಜಿಮ್ನ್ಯಾಷಿಯಂ ಹಾಗೂ ಸಾಮಾನ್ಯ ಜಿಮ್‌ಗಳಲ್ಲಿಯೂ ಪವರ್ ಲಿಫ್ಟಿಂಗ್ ಅಭ್ಯಾಸ ಮಾಡುವ ಕ್ರೀಡಾಪಟುಗಳಿದ್ದಾರೆ.

ಕರ್ನಾಟಕದ ಕ್ರೀಡಾಪಟುಗಳು ಪ್ರತಿಬಾರಿಯೂ ರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದು ರಾಜ್ಯದ ಕೀರ್ತಿ ಹೆಚ್ಚಿಸುತ್ತಿದ್ದಾರೆ ಎಂದು ಹೇಳಿದರು. ಈ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ಅನೇಕರು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಈ ಸಾಧನೆ ಮಾಡಿದವರಿಗೆ ಉದ್ಯೋಗಾವಕಾಶ ಖಂಡಿತ ಸಿಗುತ್ತವೆ. ರಾಜ್ಯ ಸರ್ಕಾರದಿಂದ ಕ್ರೀಡಾಪಟುಗಳಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ.2 ರಷ್ಟು ಮೀಸಲಾತಿ ಸೌಲಭ್ಯ ಇರುವುದರಿಂದ ಉತ್ತಮ ಭವಿಷ್ಯವಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸರಿಯಾದ ತರಬೇತಿ, ಶಿಸ್ತು ಮತ್ತು ಪ್ರೋತ್ಸಾಹ ದೊರೆತರೆ ಜಿಲ್ಲೆಯ ಕ್ರೀಡಾಪಟುಗಳು ರಾಜ್ಯ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇನ್ನಷ್ಟು ಸಾಧನೆ ಮಾಡಬಹುದು. ಯುವಕರು ಹೆಚ್ಚು ಸಂಖ್ಯೆಯಲ್ಲಿ ಈ ಕ್ರೀಡೆಗೆ ಬರಬೇಕು ಎಂದು ಕರೆ ನೀಡಿದರು.

ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆ ಗೌರವಾಧ್ಯಕ್ಷ ಕೆ.ಎಂ. ಶ್ರೀನಿವಾಸ್ ಮಾತನಾಡಿ, ಯಾವುದೇ ಕ್ರೀಡೆಯಲ್ಲಿ ಗೆಲುವು ಮತ್ತು ಸೋಲು ಎರಡನ್ನೂ ಸಮಾನವಾಗಿ ಸ್ವೀಕರಿಸುವ ಮನೋಭಾವ ಇರಬೇಕು. ಹಾಸನದಲ್ಲಿಯೂ ಪ್ರತಿಭಾವಂತ ಕ್ರೀಡಾಪಟುಗಳಿದ್ದಾರೆ ಎಂಬುದನ್ನು ಈ ಸ್ಪರ್ಧೆ ಸಾಬೀತುಪಡಿಸಿದೆ. ಈಗ ಜೂನಿಯರ್ ವಿಭಾಗದಲ್ಲಿ ಭಾಗವಹಿಸುತ್ತಿರುವವರು ಮುಂದೆ ಸೀನಿಯರ್ ವಿಭಾಗ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸ್ಪರ್ಧಿಸುವ ಮಟ್ಟಕ್ಕೆ ಬೆಳೆಯಬೇಕೆಂದು ಕರೆ ನೀಡಿದರು.

ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಕ್ರೀಡಾಪಟುಗಳು ಉತ್ಸಾಹದಿಂದ ಪಾಲ್ಗೊಂಡು ಅತ್ಯುತ್ತಮ ಪ್ರದರ್ಶನ ನೀಡಿದರು. ಕಾರ್ಯಕ್ರಮಕ್ಕೂ ಮೊದಲು ವಿಶೇಷ ಪೂಜೆ ಸಲ್ಲಿಸಲಾಯಿತು. ಪವರ್ ಲಿಫ್ಟಿಂಗ್‌ಗೆ ಅಗತ್ಯವಿರುವ ಪರಿಕರಗಳನ್ನು ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಲಾಯಿತು.

ಜಿಲ್ಲಾ ಪವರ್ ಲಿಫ್ಟಿಂಗ್ ಸಂಸ್ಥೆಯ ಪೋಷಕ ನಿರಂಜನ್ ರಾಜ್, ಸಂಸ್ಥೆ ಸಂಸ್ಥಾಪಕ ಹಾಗೂ ಕಾರ್ಯದರ್ಶಿ ಕೆ. ಹನುಮಂತೇಗೌಡ, ಸಹ ಕಾರ್ಯದರ್ಶಿ ಸಂತೋಷ್ ಶೆಟ್ಟಿ, ಉಪಾಧ್ಯಕ್ಷರಾದ ವೇಣುಗೋಪಾಲ್, ಮಂಜುನಾಥ್, ತ್ರಿಭುವನ್, ಶಶಿಧರ್, ಸಿ.ಕೆ. ರಘು, ಶಿವಮೊಗ್ಗ ಜಿಲ್ಲಾ ಪವರ್‌ಲಿಫ್ಟಿಂಗ್ ಸಂಸ್ಥೆಯ ಅಧ್ಯಕ್ಷ ಕಾರಂತ್, ಮಂಗಳೂರು ಘಟಕದ ಅಧ್ಯಕ್ಷ ಮಧುಚಂದ್ರ, ತೀರ್ಪುಗಾರರಾದ ಜಯರಾಂ, ಶಿವಣ್ಣ ಇದ್ದರು.

# ಶಾಸಕ ಶಿವಲಿಂಗೇಗೌಡರಿಂದ ಕುರುಬರಿಗೆ ಅಪಮಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ತಾಲ್ಲೂಕಿನಲ್ಲಿ ಕುರುಬ ಸಮಾಜಕ್ಕೆ ನಿರಂತರವಾಗಿ ಅನ್ಯಾಯವಾಗುತ್ತಿದ್ದು, ಸಮಾಜದ ಅಭಿವೃದ್ಧಿ, ಮೂಲ ಸೌಲಭ್ಯ, ಸಮುದಾಯ ಭವನಗಳ ನಿರ್ಮಾಣ, ರೈತರ ಸಮಸ್ಯೆಗಳು ಹಾಗೂ ನೀರಾವರಿ ಯೋಜನೆಗಳಲ್ಲಿ ತಾರತಮ್ಯ ನಡೆಯುತ್ತಿದೆ ಎಂದು ಜಿಲ್ಲಾ ಕುರುಬ ಸಂಘದ ಮುಖಂಡ ಮಹಾಲಿಂಗಪ್ಪ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಮುಂದಿನ ತಿಂಗಳಲ್ಲಿ ಇದೇ ವಿಚಾರ ಮುಂದಿಟ್ಟುಕೊಂಡು ಚಿನ್ನೇನಹಳ್ಳಿ ಗೇಟ್ ಬಳಿ ಪ್ರತಿಭಟನೆ ಮಾಡಲಾಗುವುದು. ಬಹಿರಂಗ ಸಭೆಗಳಲ್ಲಿ ಸಮಾಜದ ಮುಖಂಡರು ಹಾಗೂ ಹಿರಿಯರನ್ನು ಅವಮಾನಿಸುವ ಘಟನೆಗಳು ನಡೆಯುತ್ತಿವೆ. ಇದು ಸಮಾಜದ ಗೌರವಕ್ಕೆ ಧಕ್ಕೆ ತರುವ ಕೆಲಸ ಎಂದು ಗಂಭೀರ ಆರೋಪ ಮಾಡಿದರು.

ನಗರದಲ್ಲಿ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆ ಮಾಡುತ್ತಿರುವುದು ಸ್ವಾಗತಾರ್ಹ. ಆದರೆ ಸಿಮೆಂಟ್ ಮೂಲಕ ಬೇಕಾಬಿಟ್ಟಿಯಾಗಿ ನಿರ್ಮಿಸಲಾಗುತ್ತಿದೆ. ನಾಡಿನ ಹೆಮ್ಮೆಯ




ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಕಲ್ಲಿನಿಂದಲೇ ಮಾಡಬೇಕು. ಇದರಿಂದ ಪ್ರತಿಮೆ ಕಲ್ಲಿನಿಂದ ಶಾಶ್ವತವಾಗಿ ಉಳಿಯಲಿದೆ ಎಂದು ಆಗ್ರಹಿಸಿದರು.

ರೈತರಿಗೆ ಉಚಿತವಾಗಿ ವಿದ್ಯುತ್ ನೀಡಬೇಕು. ಪದವೀಧರ ಯುವಕರಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತಿದ್ದು, ಉದ್ಯೋಗಾವಕಾಶ ಕೊರತೆಯಿಂದ ಗ್ರಾಮೀಣ ಯುವಕರು ನಗರಗಳತ್ತ ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಉದ್ಯೋಗ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು ಎಂದು ಹೇಳಿದರು.

ತಿಪಟೂರು-ದುದ್ದ-ಹಾಸನ ರಸ್ತೆ ಸಂಪೂರ್ಣ ಹಾಳಾಗಿದೆ. ತಕ್ಷಣ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಬೇಕು. ಗಂಡಸಿ ಭಾಗದ ಏತ ನೀರಾವರಿ ಯೋಜನೆಯಲ್ಲಿ ರಾಜಕೀಯ ಹಸ್ತಕ್ಷೇಪ ಹೆಚ್ಚಾಗಿದೆ. ಕೆಲ ಹಳ್ಳಿಗಳನ್ನು ಯೋಜನೆಯಿಂದ ಹೊರಗಿಡಲಾಗಿದೆ. ನೀರಾವರಿ ಸೌಲಭ್ಯ ಸಿಗದೆ ರೈತರು ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಇದು ಹೀಗೆಯೇ ಮುಂದುವರಿದರೆ ಮುಂದಿನ ತಿಂಗಳು ಚಿನ್ನೇನಹಳ್ಳಿ ಗೇಟ್ ಬಳಿ ಪ್ರತಿಭಟನೆ ಮಾಡುವುದಾಗಿ ಎಚ್ಚರಿಕೆ ನೀಡಿದರು.

ತಾಲೂಕಿನಲ್ಲಿ ನಮ್ಮ ಸಮುದಾಯದವರ ಮೇಲೆ ವಿನಾಕಾರಣ ಕೇಸು ದಾಖಲು ಮಾಡಲಾಗುತ್ತಿದೆ.

ಇದು ತಕ್ಷಣ ನಿಲ್ಲಬೇಕು. ರಾಜಕೀಯ ದ್ವೇಷದಿಂದ ಪ್ರಕರಣ ದಾಖಲಿಸುವುದು ಪ್ರಜಾಪ್ರಭುತ್ವಕ್ಕೆ ಮಾರಕ. ಅಧಿಕಾರ ದುರುಪಯೋಗ ಮತ್ತು ರಾಜಕೀಯ ತಾರತಮ್ಯ ಅರಸೀಕೆರೆಯಲ್ಲಿ ಹೆಚ್ಚಾಗಿದ್ದು, ಇದಕ್ಕೆ ಕೊನೆಯಾಗಬೇಕು. ಅರಸೀಕೆರೆಯಲ್ಲಿ ನಡೆಯುತ್ತಿರುವ ರಾಜಕೀಯ ತಾರತಮ್ಯ ತಕ್ಷಣ ನಿಲ್ಲಿಸಿ, ಕುರುಬ ಸಮಾಜ, ರೈತರು ಹಾಗೂ ಬಡ ಜನರ ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ಶೀಘ್ರ ಈಡೇರಿಸಬೇಕು. ಇಲ್ಲವಾದರೆ ಹೋರಾಟವನ್ನು ಇನ್ನಷ್ಟು ತೀವ್ರ ಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಯುವ ಮುಖಂಡ ಭರತ್ ಮಾತನಾಡಿ, ತಾಲೂಕಿನಲ್ಲಿ ಕುರುಬ ಸಮಾಜದ ಹಕ್ಕುಗಳನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ. ಸಂಗೊಳ್ಳಿ ರಾಯಣ್ಣ ಪ್ರತಿಮೆ ನಿರ್ಮಾಣದಿಂದ ಹಿಡಿದು ಸ್ಥಳೀಯ ಶಾಸಕರು ನಮ್ಮ ಸಮುದಾಯದ ಕೆಲಸ ಕಾರ್ಯಗಳ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದ್ದರೂ, ಸಮುದಾಯದ ಹಿರಿಯರು ಶಾಸಕರನ್ನು ಸಮರ್ಥಿಸಿಕೊಳ್ಳುತ್ತಿರುವುದು ದುರದೃಷ್ಟಕರ ಎಂದು ಬೇಸರ ಹೊರ ಹಾಕಿದರು. 20 ವರ್ಷಗಳಿಂದ ಅರಸೀಕೆರೆ ತಾಲ್ಲೂಕು ಹಾಗೂ ವಿವಿಧ ಹೋಬಳಿ ಕೇಂದ್ರಗಳಲ್ಲಿ ಕುರುಬ ಸಮುದಾಯ ಭವನ ಇನ್ನೂ ಪೂರ್ಣಗೊಂಡಿಲ್ಲ. ಹಲವು ಬಾರಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಸ್ಪಂದನೆ ಸಿಕ್ಕಿಲ್ಲ. ಇದರಿಂದ ನಮ್ಮ ಸಮುದಾಯಕ್ಕೆ ತೀವ್ರ ತೊಂದರೆ ಆಗಿದೆ ಎಂದರು.

ಮುಖಂಡರಾದ ಶಿವಬಸಪ್ಪ, ವಿರೂಪಾಕ್ಷ, ಲೋಕೇಶ್ ಇದ್ದರು.

# ಸರ್ಕಾರಿ ಐಟಿಐಗೆ 60 ವರ್ಷದ ಸಂಭ್ರಮ: ಗುರುವಂದನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಬಿ.ಎಂ. ರಸ್ತೆಯಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಆರಂಭವಾಗಿ 60 ವರ್ಷ ತುಂಬಿದ್ದು, ಇದರ ಅಂಗವಾಗಿ ಮೇ 2 ಮತ್ತು 3 ರಂದು ಸಂಭ್ರಮಾಚರಣೆ, ಗುರುವಂದನೆ ಹಾಗೂ ಹಳೆಯ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಎಂದು ಐಟಿಐ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕೆ.ಎಂ. ಶ್ರೀನಿವಾಸ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಐಟಿಐ ಹಳೆಯ ವಿದ್ಯಾರ್ಥಿಗಳ ಸಂಘ, ಹಳೆ ವಿದ್ಯಾರ್ಥಿಗಳು, ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗದವರ ಸಂಯುಕ್ತ ಆಶ್ರಯದಲ್ಲಿ ಈ ವಿಶೇಷ ಕಾರ್ಯಕ್ರಮ, ಎರಡು ದಿನಗಳ ಕಾಲ ನಡೆಯಲಿದೆ. ಮೇ 3ರಂದು ನಡೆಯುವ ಮುಖ್ಯ ಸಮಾರಂಭದಲ್ಲಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಆಯುಕ್ತೆ ಶಿಲ್ಪ ಎಂ. ಅವರು ಗೌರವ ಉಪಸ್ಥಿತಿ ವಹಿಸಲಿದ್ದು, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ



ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಎಸ್ಪಿ ಶುಭಾನ್ವಿತಾ, ಜಿಪಂ ಸಿಇಒ ಬಿ.ಆರ್. ಪೂರ್ಣಿಮಾ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ನಿರ್ದೇಶಕ ಎನ್.ಎಸ್. ಚಿದಾನಂದ, ಜಂಟಿ ನಿರ್ದೇಶಕ ಬಿ.ಎಲ್. ಚಂದ್ರಶೇಖರ, ಹೆಚ್.ಪಿ. ಮಂಜುನಾಥ, ಎಸ್. ಮಂಜುಳ, ಉಪನಿರ್ದೇಶಕರಾದ ಕೆ.ಸಿ. ರವಿಶಂಕರ್ ಸೇರಿ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಅಧ್ಯಕ್ಷತೆಯನ್ನು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯರಾದ ಪ್ರದೀಪ್ ಎಂ. ವಹಿಸಲಿದ್ದಾರೆ. ಜೊತೆಗೆ ಆಲೂರು, ಹೊಳೆನರಸೀಪುರ, ಮೊಸಳೆಹೊಸಹಳ್ಳಿ, ಚನ್ನರಾಯ ಪಟ್ಟಣ, ಪಡುವಲಹಿಪ್ಪೆ, ಬಾಗೂರು ಹಾಗೂ ಬೇಲೂರು ಸರ್ಕಾರಿ ಐಟಿಐಗಳ ಪ್ರಾಚಾರ್ಯರು ಹಾಗೂ ಆಡಳಿತಾಧಿಕಾರಿಗಳೂ ಸಹ ಭಾಗವಹಿಸಲಿದ್ದಾರೆ.

ಗುರುವಂದನಾ ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಿಗೆ ಸನ್ಮಾನ, ಹಳೆ ವಿದ್ಯಾರ್ಥಿಗಳ ನೆನಪು ಹಂಚಿಕೆ, ವಿದ್ಯಾರ್ಥಿಗಳ ಸಮ್ಮಿಲನ, ಸಂಸ್ಥೆಯ ಬೆಳವಣಿಗೆ ಕುರಿತು ವಿಶೇಷ ಚರ್ಚೆಗಳು ನಡೆಯಲಿವೆ. ಹಲವು ವರ್ಷಗಳ ಬಳಿಕ ಹಳೆಯ ವಿದ್ಯಾರ್ಥಿಗಳು ಒಂದೇ ವೇದಿಕೆಯಲ್ಲಿ ಸೇರುವ ಈ ಕಾರ್ಯಕ್ರಮಕ್ಕೆ ವಿಶೇಷ ಮಹತ್ವ ನೀಡಲಾಗಿದೆ ಎಂದ ಅವರು, ಮೇ 3ರಂದು ಬೆಳಿಗ್ಗೆ 10 ಗಂಟೆಗೆ ಖ್ಯಾತ ಹಾಸ್ಯ ಕಲಾವಿದ ಮಿಮಿಕ್ರಿ ಗೋಪಿ ಅವರಿಂದ ವಿಶೇಷ ಮನರಂಜನಾ ಕಾರ್ಯಕ್ರಮ ಆಯೋಜಿಸಲಾಗಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

60 ವರ್ಷಗಳ ಸೇವಾ ಪಯಣ ಸಂಭ್ರಮಿಸುವ ಕಾರ್ಯಕ್ರಮಕ್ಕೆ ಎಲ್ಲಾ ಹಳೆಯ ವಿದ್ಯಾರ್ಥಿಗಳು, ಪ್ರಸ್ತುತ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಐಟಿಐ ವಿದ್ಯಾರ್ಥಿಗಳ ಸಂಘದ ಪ್ರಾಚಾರ್ಯ ತೌಫಿಕ್ ಅಹಮದ್, ಖಜಾಂಚಿ ಎ.ಎನ್. ಪರಮೇಶ್, ನಿರ್ದೇಶಕರಾದ ಸುರೇಶ್, ರಾಮಕೃಷ್ಣ ಇದ್ದರು.

# ಫಲಿತಾಂಶ ಚೇತರಿಕೆ: ಶಿಕ್ಷಣ ಇಲಾಖೆ ಪ್ರಯತ್ನ ಸಫಲ

## ಫಲ ನೀಡಿದ ಫ್ರೈಡೇ ಫ್ರೆಂಡ್ I ಸಂಸದರ ನಿರಂತರ ಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೊದಲ ಸ್ಥಾನ ಗಳಿಸಲೇಬೇಕೆಂದು ಶೈಕ್ಷಣಿಕ ವರ್ಷಾರಂಭದಿಂದ ಸಾಕಷ್ಟು ಶ್ರಮವಹಿಸಿದ್ದರ ಪರಿಣಾಮ ಜಿಲ್ಲೆ ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದು ಟಾಪ್ 5ರಲ್ಲಿ ಸ್ಥಾನ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಮಯೋಚಿತ ಪ್ರಯತ್ನ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಅವಿರತ ಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ. ಜೊತೆಗೆ ಜಿಲ್ಲಾಡಳಿತವೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿದ್ದು ಫಲಿತಾಂಶ ಚೇತರಿಕೆಗೆ ಕಾರಣ ಎನ್ನಲಾಗುತ್ತಿದೆ.

ಫಲಿತಾಂಶ ಸುಧಾರಣೆಗೆ ಶಿಕ್ಷಣ ಇಲಾಖೆ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತು. ಕಳೆದ ವರ್ಷ 6ನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದ ಜಿಲ್ಲೆ ಈ ಬಾರಿ 2 ಸ್ಥಾನ ಮುಂದಕ್ಕೆ ಬರಲು ಸಾಕಷ್ಟು ಪರಿಶ್ರಮವಿದೆ. ವಿಶೇಷ ತರಗತಿ, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ದತ್ತು ಸ್ವೀಕಾರ, ಮನೆ ಮನೆ ಭೇಟಿ, ಪೋಷಕರಿಗೆ ಜಾಗೃತಿ ಕಾರ್ಯಕ್ರಮ, ಪೂರ್ವ ಸಿದ್ಧತಾ ಪರೀಕ್ಷೆ ಹೀಗೆ ಹತ್ತು ಹಲವು ಕಾರ್ಯಕ್ರಮಗಳು ಫಲಿತಾಂಶಕ್ಕೆ ನೆರವಾಗಿವೆ.

ಪೂರ್ವ ಸಿದ್ಧತಾ ಪರೀಕ್ಷೆಯನ್ನು ಜ. 5 ರಿಂದ 10ರ ವರೆಗೆ ನಡೆಸಲಾಗಿತ್ತು. 2ನೇ ಹಂತದ ಪರೀಕ್ಷೆ ಜ. 27 ರಿಂದ ಫೆ. 2ರ ವರೆಗೆ ಹಾಗೂ ಮೂರನೇ ಹಂತದ ಪರೀಕ್ಷೆ ಫೆ. 23 ರಿಂದ 28ರ ವರೆಗೆ ನಡೆದಿದ್ದವು. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಂಡಳಿ ಅಂತರ್ಜಾಲದಲ್ಲಿ ಸ್ಟೂಡೆಂಟ್ ಕಾರ್ನರ್ ಆ್ಯಪ್ ಮೂಲಕ ನಾಲ್ಕು ವರ್ಷದ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಬಿಡುಗಡೆಗೊಳಿಸಿತ್ತು. ಪ್ರತಿ ಪಠ್ಯವಾರು ಆಯ್ದ ಪ್ರಶ್ನಾವಳಿಗಳ ನೀಲನಕ್ಷೆಯನ್ನು ಒದಗಿಸಿದ್ದು ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ.



### ಜಿಲ್ಲಾಧಿಕಾರಿ ಕನಸಿನ ಫ್ರೈಡೇ ಫ್ರೆಂಡ್

ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಕೈಗೊಂಡ ಫ್ರೈಡೇ ಫ್ರೆಂಡ್ ಕಾರ್ಯಕ್ರಮ ಪರಿಣಾಮ ಬೀರಿದೆ. ಶೈಕ್ಷಣಿಕ ವರ್ಷದ ಮಧ್ಯದಲ್ಲೇ ಈ ಯೋಜನೆ ಜಾರಿಗೊಳಿಸಿದ ಅವರು ಪ್ರತಿ ಮಂಗಳವಾರ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಭೇಟಿ ವಿದ್ಯಾರ್ಥಿಗಳ ವ್ಯಾಸಂಗ ಪ್ರಗತಿ ಪರಿಶೀಲನೆ ನಡೆಸುತ್ತಿದ್ದರು. ಪೂರ್ವ ಸಿದ್ಧತಾ ಪರೀಕ್ಷೆ ಸಮಯದಲ್ಲೂ ಶಾಲೆಗಳಿಗೆ ಭೇಟಿ ನೀಡಿ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಮಕ್ಕಳಲ್ಲಿ ಪರೀಕ್ಷಾ ಭಯ ಹೋಗಲಾಡಿಸಲು ಶ್ರಮಿಸಿದರು.

> **ತಾಯಂದಿರ ಸಭೆ ಕರೆದು ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಹೇಳುತ್ತಿದ್ದೆವು. ಗೈರು ಹಾಜರಾತಿಯನ್ನು ತಪ್ಪಿಸಿ ಪೋಷಕರ ಮನವೊಲಿಸಿ ಮಕ್ಕಳು ಶಾಲೆಗೆ ಬರುವಂತೆ ಎಚ್ಚರ ವಹಿಸಲಾಯಿತು. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಂಡಳಿಯು ಪಠ್ಯವಾರು ಬ್ಲೂ ಪ್ರಿಂಟ್ ಕೊಟ್ಟಿದ್ದರಿಂದ ಅನುಕೂಲವಾಯಿತು. ನಾಲ್ಕು ಪೂರ್ವ ಸಿದ್ಧತಾ ಸಭೆಗಳು ಫಲಿತಾಂಶ ಚೇತರಿಕೆಗೆ ಕಾರಣವಾಗಿವೆ.**
>
> **– ಕೆ.ಎನ್.ಬಲರಾಮ್, ಡಿಡಿಪಿಐ**

ಹಾಸ್ಟೆಲ್‌ಗೆ ಜಿಲ್ಲಾಧಿಕಾರಿ ಭೇಟಿಯಾಗುತ್ತಾರೆಂಬ ಕಾರಣದಿಂದ ವಾರ್ಡನ್‌ಗಳು ಸಹ ಮುತುವರ್ಜಿ ವಹಿಸಿ ಮಕ್ಕಳನ್ನು ಓದಿಗೆ ಪ್ರೇರೇಪಿಸುತ್ತಿದ್ದರು. ಜಿಲ್ಲಾಧಿಕಾರಿ ಅವರ ಭೇಟಿ ಕೇವಲ ಪಠ್ಯ ಪುಸ್ತಕ ಅಧ್ಯಯನಕ್ಕೆ ಮಾತ್ರವಲ್ಲದೆ ವ್ಯಕ್ತಿತ್ವ ವಿಕಸನಕ್ಕೂ ನೆರವಾಗಿದೆ ಎಂಬುದು ಅಷ್ಟೇ ಸತ್ಯ.

### ಸಂಸದ ಶ್ರೇಯಸ್ ಪಟೇಲ್ ಸಭೆ

ಸಂಸದ ಶ್ರೇಯಸ್ ಪಟೇಲ್ ಅವರು ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಹಾಸನ ಮೊದಲ ಸ್ಥಾನದಲ್ಲಿರಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತಲೇ ಬಂದಿದ್ದರು. ಒಟ್ಟು ಮೂರು ಬಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆ ನಡೆಸಿದ್ದ ಅವರು ಶಿಕ್ಷಕರ ಸಮಸ್ಯೆಗಳನ್ನು ಆಲಿಸಿ ಪರಿಹಾರ ಕ್ರಮ ಕೈಗೊಂಡಿದ್ದರು. ಹೀಗಾಗಿ ಜಿಲ್ಲೆಯ ಎಲ್ಲಾ ಶಿಕ್ಷಕರು ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿದ್ದರು.

# ಸಂಭ್ರಮದ ಮಿಡಿಚಲಮ್ಮ ದೇವಿ ಜಾತ್ರೋತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕಿನ ಹೊಸ ಉತ್ತತ್ತನಹಳ್ಳಿ ಗ್ರಾಮದಲ್ಲಿ ಗ್ರಾಮದ ಅಧಿಷ್ಠಾತ್ರ ದೇವಿ ಮಿಡಿಚಲಮ್ಮ ತಾಯಿಯ ಜಾತ್ರೋತ್ಸವ ಭಕ್ತಿಭಾವದಿಂದ ನೆರವೇರಿತು. ಗ್ರಾಮಸ್ಥರು, ಸುತ್ತಮುತ್ತಲಿನ ಹಳ್ಳಿಗಳ ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿ ದೇವಿಯ ಆಶೀರ್ವಾದ ಪಡೆದರು.

ಜಾತ್ರೆಯ ಅಂಗವಾಗಿ ಬೆಳಗಿನ ಜಾವದಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಭಿಷೇಕ, ಅಲಂಕಾರ ಹಾಗೂ ಹೋಮ-ಹವನ ಕಾರ್ಯಕ್ರಮಗಳು ನಡೆದವು. ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಭಕ್ತರು ದೇವಿಗೆ ಕಾಯಿ-ಹಣ್ಣು, ಪುಷ್ಪ ಹಾಗೂ ಹರಕೆ ಸಮರ್ಪಿಸಿದರು. ಗ್ರಾಮದ ಹಿರಿಯರು ಹಾಗೂ ಅರ್ಚಕರು ವೇದ ಮಂತ್ರಗಳೊಂದಿಗೆ ಪೂಜೆಯನ್ನು ನೆರವೇರಿಸಿದರು.

ಮಧ್ಯಾಹ್ನ ವೇಳೆಗೆ ಮಿಡಿಚಲಮ್ಮ ತಾಯಿಯ ಉತ್ಸವ ಮೂರ್ತಿಯನ್ನು ಅಡ್ಡ ಪಲ್ಲಕ್ಕಿ ಮೂಲಕ ಗ್ರಾಮ ಸುತ್ತಲೂ ಭವ್ಯ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ತಾಳಮದ್ದಳೆ, ಡೊಳ್ಳು-ಕುಣಿತ ಹಾಗೂ ಜನಪದ ಕಲಾ ತಂಡಗಳು ಭಾಗವಹಿಸಿ ಸಂಭ್ರಮ ಹೆಚ್ಚಿಸಿತು. ಮಹಿಳೆಯರು ಆರತಿ ತೆಗೆದು ದೇವಿಯನ್ನು ಬರಮಾಡಿಕೊಂಡರು.

ಜಾತ್ರೆಯ ಪ್ರಮುಖ ಆಕರ್ಷಣೆಯಾಗಿ ಭಕ್ತರಿಂದ ವಿಶೇಷ ಹರಕೆಗಳ ಸಮರ್ಪಣೆ ಮಾಡಿಸಿದರು. ಕೆಲ ಭಕ್ತರು ತಮ್ಮ ಮನೋವಾಂಛೆಗಳು ನೆರವೇರಿದ ಹಿನ್ನೆಲೆಯಲ್ಲಿ ದೇವಿಗೆ ವಿಶೇಷ ಕಾಣಿಕೆಗಳನ್ನು ಸಮರ್ಪಿಸಿದರು.

ನಂತರದಲ್ಲಿ ಮಹಾಪೂಜೆ ಹಾಗೂ ಪ್ರಸಾದ ವಿತರಣೆ ನಡೆಯಿತು. ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿದ್ದು, ಸಾವಿರಾರು ಜನರು ಭಾಗವಹಿಸಿ ಪ್ರಸಾದ ಸ್ವೀಕರಿಸಿದರು. ಜಾತ್ರೆಯ ಸಂದರ್ಭದಲ್ಲಿ ಗ್ರಾಮದಲ್ಲಿ ಉತ್ಸವದ ವಾತಾವರಣ ಕಂಗೊಳಿಸಿತು.

ಜಾತ್ರೆಯ ನಿಮಿತ್ತ ಗ್ರಾಮದಲ್ಲಿ ಸ್ವಚ್ಛತೆ, ಭದ್ರತೆ ಮತ್ತು ವಾಹನ ಸಂಚಾರಕ್ಕೆ ವಿಶೇಷ ವ್ಯವಸ್ಥೆ ಮಾಡಲಾಗಿತ್ತು.

ಚನ್ನಕೇಶವ ದೇಗುಲ ಮಾಜಿ ಧರ್ಮದರ್ಶಿ ಯು.ಟಿ. ಕೇಶವಮೂರ್ತಿ, ಸನ್ಯಾಸಿಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಶಿವು, ಬಾಳೆಹಣ್ಣು ರಮೇಶ್ ಇತರರಿದ್ದರು.

# ಸಮನ್ವಯದ ಕೆಲಸದಿಂದ ಉತ್ತಮ ಆಡಳಿತ ಸಾಧ್ಯ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸ್ಥಳೀಯ ಆಡಳಿತದಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಮನ್ವಯತೆ ಮತ್ತು ಪಾರದರ್ಶಕತೆಯಿಂದ ಕೆಲಸ ಮಾಡಿದರೆ ಉತ್ತಮ ಆಡಳಿತ ಸಾಧ್ಯ. ಮಹಿಳಾ ಮೀಸಲಾತಿ, ಮಹಿಳಾ ಆರ್ಥಿಕ ಸಬಲೀಕರಣ ಇವುಗಳನ್ನು ನಾವು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಾತ್ರ ಕಾಣಬಹುದು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ನಡೆದ ಪಂಚಾಯತ್ ರಾಜ್ ದಿನಾಚರಣೆಯಲ್ಲಿ ಮಾತನಾಡಿ, 1993 ರಲ್ಲಿ 73ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಗೆ ಸಂವಿಧಾನಿಕ ಮಾನ್ಯತೆ ನೀಡಲಾಯಿತು ಎಂದರು.

ಗ್ರಾಮಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಪಂಚಾಯತ್‌ಗಳ ಪಾತ್ರ ಮಹತ್ವವಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಮಹಿಳೆಯರಿಗೆ ಶೇ. 50ಕ್ಕಿಂತಲೂ ಹೆಚ್ಚಿನ ಮೀಸಲಾತಿ ನೀಡಲಾಗಿದ್ದು, ಹೆಚ್ಚು ಮಹಿಳಾ ಸದಸ್ಯರೇ ಆಯ್ಕೆಯಾಗುತ್ತಾರೆ. ಮಹಿಳಾ ಮೀಸಲಾತಿ, ಮಹಿಳಾ ಆರ್ಥಿಕ ಸಬಲೀಕರಣ ಇವುಗಳನ್ನು ನಾವು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕಾಣಬಹುದು ಎಂದರು.

ಕಾರ್ಯಕ್ರಮದಲ್ಲಿ 2025-26ನೇ ಸಾಲಿನಲ್ಲಿ ಆಸ್ತಿ ತೆರಿಗೆ ಸಂಗ್ರಹಣೆಯಲ್ಲಿ ಉತ್ತಮ ಸಾಧನೆ ಮಾಡಿದ ಅರಸೀಕೆರೆ ತಾಲ್ಲೂಕು ಜಾವಗಲ್ ಗ್ರಾಮ ಪಂಚಾಯಿತಿ, ಹಾಸನ ತಾಲ್ಲೂಕು ಕೌಶಿಕ ಗ್ರಾಮ ಪಂಚಾಯಿತಿ ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ಹಿರಿಸಾವೆ ಗ್ರಾಮ ಪಂಚಾಯಿತಿ ಅಧಿಕಾರಿಗಳನ್ನು ಗೌರವಿಸಲಾಯಿತು.

ಗ್ರಾಮ ಪಂಚಾಯಿತಿ ಅರಿವು ಕೇಂದ್ರವನ್ನು ಉತ್ತಮವಾಗಿ ಅಭಿವೃದ್ಧಿಪಡಿಸಿದ ಹಾಸನ ತಾಲ್ಲೂಕು ಹೂವಿನಹಳ್ಳಿ ಕಾವಲ್ ಗ್ರಾಮ ಪಂಚಾಯಿತಿ, ಉತ್ತಮ ಮಹಿಳಾ ಸ್ನೇಹಿ ಗ್ರಾಮ ಪಂಚಾಯಿತಿಯಾಗಿ ಅಭಿವೃದ್ಧಿಪಡಿಸಿದ ಆಲೂರು ತಾಲ್ಲೂಕು ಪಾಳ್ಯ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳನ್ನು ಗೌರವಿಸಲಾಯಿತು.

2022-23ನೇ ಸಾಲಿನ ರಾಷ್ಟ್ರೀಯ ಪಂಚಾಯತ್ ರಾಜ್ ಪುರಸ್ಕಾರವನ್ನು ಪಡೆದ ಸಕಲೇಶಪುರ ತಾಲ್ಲೂಕು ಬಿರಡಹಳ್ಳಿ ಗ್ರಾಮ ಪಂಚಾಯಿತಿಯ ಅಧಿಕಾರಿಗಳನ್ನು ಗೌರವಿಸಲಾಯಿತು.

ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಬಾಬು, ಮುಖ್ಯ ಯೋಜನಾಧಿಕಾರಿ ಕೃಷ್ಣಮೂರ್ತಿ ಇತರರಿದ್ದರು.

# ಗ್ರಾಮೀಣ ಜನರ ಜೀವನ ಸುಧಾರಿಸಲು ಶ್ರಮಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗ್ರಾಮೀಣ ಭಾಗದ ಜನರ ಜೀವನವನ್ನು ಉತ್ತಮಗೊಳಿಸಿಲು ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಹಾಗೂ ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಕೃಷ್ಣಮೂರ್ತಿ ಸೂಚನೆ ನೀಡಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ್ ಕಾರ್ಯಕ್ರಮದಲ್ಲಿ ಅಬ್ದುಲ್ ನಸೀರ್ ಸಾಬ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಾಗದಂತೆ ನೋಡಿಕೊಳ್ಳಿ ಎಂದು ಹೇಳಿದರು.

ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಒಗ್ಗಟ್ಟಾಗಿ ಕೆಲಸ ನಿರ್ವಹಿಸಿದರೆ ಮಾತ್ರ ಒಂದು ಗ್ರಾಮ ಪಂಚಾಯತಿಯನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಬಹುದು ಎಂದು ಮುಖ್ಯ ಯೋಜನಾಧಿಕಾರಿ ಕೃಷ್ಣಮೂರ್ತಿ ಅವರು ಹೇಳಿದರು.




ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಡಿ. ಗಿರೀಶ್ ಮಾತನಾಡಿ, ಕುಡಿಯುವ ನೀರು, ಸ್ವಚ್ಛತೆ, ಬೀದಿ ದೀಪ ಸೇರಿ ಇನ್ನಿತರ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಸಾರ್ವಜನಿಕರಿಗೆ ಯಾವುದೇ ಮೂಲಭೂತ ಸೌಕರ್ಯಗಳ ಕೊರತೆಯಾಗದಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇರುವಂತಹ ಗ್ರಂಥಾಲಯಗಳನ್ನು ಡಿಜಿಟಲೀಕರಣ ಮಾಡುವ ಜೊತೆಗೆ ಎಲ್ಲಾ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯೋಗವಾಗುವ ಪುಸ್ತಕಗಳನ್ನು ಗ್ರಂಥಾಲಯದಲ್ಲಿ ಇರಿಸಿ ವಿದ್ಯಾರ್ಥಿಗಳ ಓದಿಗೆ ನೆರವಾಗುವಂತೆ ಸೂಚನೆ ನೀಡಿದರು.

ಎಲ್ಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಪ್ರತಿನಿತ್ಯ ಹಳ್ಳಿಗಳಿಗೆ ಭೇಟಿ ನೀಡಿ ಸಾರ್ವಜನಿಕರ ಕುಂದು ಕೊರತೆ ಅಹವಾಲುಗಳನ್ನು ಸ್ವೀಕರಿಸಿ ಅವರ ಸಮಸ್ಯೆಗಳಿಗೆ ಸಕಾಲದಲ್ಲಿ ಸ್ಪಂದಿಸುವಂತೆ ಸೂಚನೆ ನೀಡಿದರು.

ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿದ ವಿವಿಧ ಗ್ರಾಮ ಪಂಚಾಯಿತಿ ಪಿಡಿಒ, ಕಾರ್ಯದರ್ಶಿ, ಬಿಲ್ ಕಲೆಕ್ಟರ್, ಕಂಪ್ಯೂಟರ್ ಆಪರೇಟರ್, ನೀರುಗಂಟಿ, ಗ್ರಾಮ ಪಂಚಾಯಿತಿ ಮಟ್ಟದ ಅರಿವು ಕೇಂದ್ರಗಳ ಮೇಲ್ವಿಚಾರಕರಿಗೆ ಪ್ರಮಾಣ ಪತ್ರ ವಿತರಣೆ ಮಾಡಿದರು.

ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಸಿ.ಬಿ. ದಿನೇಶ್ ಹಾಗೂ ಸಿಬ್ಬಂದಿ ಹಾಜರಿದ್ದರು.

# ಪುರಸಭೆ ಸದಸ್ಯ ಎ.ಆರ್. ಅಶೋಕ್ ಸದಸ್ಯತ್ವ ರದ್ದು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ಪುರಸಭೆ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಎ.ಆರ್.ಅಶೋಕ್ ಅವರ ಸದಸ್ಯತ್ವ ಅನರ್ಹಗೊಂಡಿದೆ.

ಪಕ್ಷ ವಿರೋಧಿ ಚಟುವಟಿಕೆ ಆರೋಪದಡಿ ಕಾಂಗ್ರೆಸ್ ಸದಸ್ಯತ್ವ ರದ್ದುಗೊಳಿಸುವಂತೆ ನ್ಯಾಯಾಲಯ ಮೆಟ್ಟಿಲೇರಿತ್ತು. ಕಾಂಗ್ರೆಸ್‌ನಿಂದ ಚುನಾಯಿತರಾಗಿದ್ದ ಅಶೋಕ್ ಅವರು ಅಧ್ಯಕ್ಷ ಸ್ಥಾನ ಬಿಟ್ಟುಕೊಡಲು ಹಿಂದೇಟು ಹಾಕಿದ್ದ ಹಿನ್ನೆಲೆಯಲ್ಲಿ ಸ್ವಪಕ್ಷಿಯರೇ ಅವಿಶ್ವಾಸ ನಿರ್ಣಯಕ್ಕೆ ಮುಂದಾಗಿ ಪಕ್ಷದಿಂದ ವಿಪ್ ಜಾರಿ ಮಾಡಲಾಗಿತ್ತು. ಅಶೋಕ್ ಅವರು ವಿಪ್ ಉಲ್ಲಂಘಿಸಿದ್ದರಿಂದ ಸದಸ್ಯತ್ವ ರದ್ದುಪಡಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಪಕ್ಷದ ನಿರ್ದೇಶನದಂತೆ ನಡೆದುಕೊಳ್ಳದೆ ವಿಪ್ ಉಲ್ಲಂಘನೆ ದೃಢಪಟ್ಟ ಹಿನ್ನಲೆ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮ 1987 ಕಲಂ 3, 3(1)(ಬಿ), 4(1)(ಎ) ಮತ್ತು 4(1)(ಬಿ) ರ ಅನುಸಾರ ಸದಸ್ಯತ್ವ ರದ್ದುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್-26

1986: ಉಕ್ರೇನ್‌ನ ಚೆರ್ನೋಬಿಲ್ ಅಣು ವಿದ್ಯುತ್ ಸ್ಥಾವರದಲ್ಲಿ ಭೀಕರ ಸ್ಫೋಟ ಸಂಭವಿಸಿ, ಜಗತ್ತಿನ ಅತ್ಯಂತ ದೊಡ್ಡ ಅಣು ದುರಂತವಾದ ಚೆರ್ನೋಬಿಲ್ ದುರಂತ ಸಂಭವಿಸಿತು.

1962: ಅಮೇರಿಕಾದ ನಾಸಾ ರೇಂಜರ್ 4 ಚಂದ್ರನ ಮೇಲೆ ಇಳಿದ ಮೊದಲ ಯಾನವಾಯಿತು.

1607: ಇಂಗ್ಲಿಷ್ ವಸಾಹತುಗಾರರು ಅಮೇರಿಕಾದಲ್ಲಿ ಕೇಪ್ ಹೆನ್ರಿ ಪ್ರದೇಶಕ್ಕೆ ಆಗಮಿಸಿದರು.

### ಜನನ

1564: ಪ್ರಸಿದ್ಧ ನಾಟಕಕಾರ ವಿಲಿಯಂ ಶೇಕ್ಸ್‌ಪಿಯರ್

1798: ಕಲಾವಿದ ಯೂಜೆನ್ ಡೆಲಾಕ್ರೋವಾ

1894: ಸ್ವಾತಂತ್ರ್ಯ ಹೋರಾಟಗಾರ ಸತ್ಯೇಂದ್ರನಾಥ್ ಬೋಸ್

### ಮರಣ

1984: ಭಾರತೀಯ ಚಲನಚಿತ್ರ ನಟ ಕಿಶೋರ್ ಸಾಹು

1989: ಪ್ರಸಿದ್ಧ ಚಲನಚಿತ್ರ ನಿರ್ದೇಶಕ ಲುಸಿಯೋ ಫುಲ್ಚಿ

# ನಕಾರಾತ್ಮಕ ಭಾವನೆಗಳನ್ನು ದೃಢಮನಸ್ಸಿನಿಂದ ಒದ್ದು ಓಡಿಸಿ


**– ಪ್ರಶಾಂತ್‌ಎನ್.ಆರ್**
**ಆಪ್ತ ಸಲಹಾ ಮನಃಶಾಸ್ತ್ರಜ್ಞರು ಮೊ.ನಂ. 9481545719**

ನಕಾರಾತ್ಮಕ ಭಾವನೆಗಳನ್ನು ದೃಢಮನಸ್ಸಿನಿಂದ ಒದ್ದು ಓಡಿಸಿ ಪ್ರಸಿದ್ಧ ಫ್ರೆಂಚ್ ತತ್ವಜ್ಞಾನಿ ಬ್ಲೇಸ್ ಪಾಸ್ಕಲ್ ರವರಿಗೆ ಯಾರೋ ಒಬ್ಬರು ಹೇಳಿದರಂತೆ, ನನಗೆ ನಿಮ್ಮಂತೆ ಮೆದುಳು ಇದ್ದಿದ್ದರೆ ನಾನು ಇನ್ನೂ ಉತ್ತಮ ವ್ಯಕ್ತಿಯಾಗುತ್ತಿದ್ದೆ ಎಂದು. ಅದಕ್ಕೆ ಪಾಸ್ಕಲ್‌ರವರು ನೀಡಿದ ಉತ್ತರ ಬಹಳ ಮನೋಜ್ಞವಾಗಿದೆ. ಮೊದಲು ಉತ್ತಮ ವ್ಯಕ್ತಿಯಾಗು ನಿನಗೂ ನನ್ನಂತಹ ಮೆದುಳು ಬರುತ್ತದೆ ಎಂದು. ಉತ್ತಮ ಮೆದುಳು ಉತ್ತಮವಾಗಿ ಕಾರ್ಯನಿರ್ವಹಿಸಬೇಕೆಂದರೆ ನಾವೂ ಉತ್ತಮ ವ್ಯಕ್ತಿಗಳಾಗಬೇಕೆಂಬುದು ಸತ್ಯ. ನಮ್ಮಲ್ಲಿ ಪ್ರಾಮಾಣಿಕತೆ, ಶೀಲಸಂಪನ್ನತೆ, ಧನಾತ್ಮಕ ಮನೋಭಾವ ಇರಬೇಕು. ಇವೆಲ್ಲಕ್ಕೂ ಮೂಲ ಮಾನಸಿಕ ದೃಢತೆ.

ಸಮಯ ಯಾರಿಗೂ ಕಾಯುವುದಿಲ್ಲ ಸಮಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಬೇಕಾಗಿರುವುದು ಮಾನಸಿಕ ದೃಢತೆ. ದೈಹಿಕವಾಗಿ ಸದೃಢಗೊಳ್ಳಲು ದಿನನಿತ್ಯ ವಾಕಿಂಗ್, ಜಾಗಿಂಗ್, ಜಿಮ್ ಹೀಗೆ ಏನೇನೊ ಮಾಡುತ್ತೇವೆ. ಆದರೆ ಮಾನಸಿಕ ದೃಢತೆಗೆ ಗಮನ ಕೊಡುವುದೇ ಇಲ್ಲ. ಕೆಲವು ಪ್ರಾಣಿಗಳು ತಮಗಿಂತ ಬಲಿಷ್ಠವಾದ ಪ್ರಾಣಿಗಳನ್ನು ಗೆದ್ದು ಪ್ರಬಲವಾಗಿ ಕಾಣುತ್ತವೆ. ಆದರೆ ನಾವು ನಿಜವಾಗಿಯೂ ಬಲಹೀನರು, ಏಕೆಂದರೆ ಒಂದು ಬಾರಿ ಯಾವುದಾದರು ಬಲಹೀನತೆಗೆ ಬಲಿಯಾಗಿ ಬಿಟ್ಟರೆ ಅದರಿಂದಾಚೆ ಬರಲು ಕಷ್ಟಪಡುತ್ತೇವೆ. ಇಂತಹ ಬಲಹೀನತೆಯ ಆಳದಿಂದ ಹೊರಬರಲು ಬಹಳ ಸಮಯವಾಗುತ್ತದೆ.

### ಮಾನಸಿಕ ಪಕ್ವತೆಯ ಸಂಕೇತವೇ ಮಾನಸಿಕ ದೃಢತೆ

ದೃಢತೆ ಎಂದರೆ ಅತ್ಯುತ್ತಮ ಸಾಧನೆಗೆ ನಮ್ಮನ್ನು ಅಣಿಗೊಳಿಸುವ ಸಿದ್ಧತೆ. ಸಿದ್ಧತೆಯಿಂದ ದೃಢತೆ. ಮನಸ್ಸು ಪಕ್ವವಾದಾಗ ದೃಢತೆ ಬೆಳೆಯುತ್ತದೆ. ದೃಢತೆ ಎನ್ನುವುದು ತಪಸ್ಸಿನಂತೆ, ಒಮ್ಮೆಲೆ ಸಾಧಸುವುದಕ್ಕಾಗುವುದಿಲ್ಲ. ಹಣಕೊಟ್ಟು ಕೊಳ್ಳುವಂತಹ ವಸ್ತುವಲ್ಲ, ನಮ್ಮ ಬುದ್ಧಿಯನ್ನು ಮನಸ್ಸಿನ ಕೈಗೆ ಕೊಟ್ಟರೆ ದೃಢತೆ ಸಾಧಿಸುವುದು ಕಷ್ಟ. ಅದೇ ಮೆದುಳಿನ ಕೈಗೆ ಕೊಟ್ಟರೆ ದೃಢತೆಯು ಚಿಗುರೊಡೆಯಲು ಪ್ರಾರಂಭಿಸುತ್ತದೆ. ಅದು ನಮ್ಮ ಬಲ, ನಮಗಿರುವ ಭದ್ರವಾದ ಭಾವ. ನಮ್ಮ ಅನುಭವಗಳ ಆಧಾರದಲ್ಲಿ ಯೋಚಿಸಿ ವಾಸ್ತವಿಕತೆಯನ್ನು ಸೇರಿಸಿದಾಗ ದೃಢತೆಯೆಡೆಗೆ ಸಾಗಲು ಸಾಧ್ಯ. ತಂದೆ-ತಾಯಿ ಮಾರ್ಗದರ್ಶನದಿಂದ ಮಾನಸಿಕ ದೃಢತೆಯೆನ್ನುವುದು ಬಾಲ್ಯದಿಂದಲೇ ಚಿಗುರೊಡೆಯುತ್ತದೆ. ಹೀಗಾಗಿ ಬಾಲ್ಯದಿಂದಲೇ ತಂದೆ-ತಾಯಿ ಮಕ್ಕಳನ್ನು ಭಯಮುಕ್ತವಾತಾವರಣದಲ್ಲಿ ಬೆಳೆಸಬೇಕು.ದೆವ್ವ, ಭೂತ,




ಪಿಶಾಚಿ ಇತ್ಯಾದಿಗಳ ಕಲ್ಪನೆಗಳು ಮಕ್ಕಳಲ್ಲಿ ಬೆಳೆಯದಂತೆ ನೋಡಿಕೊಳ್ಳಬೇಕು. ಭಯವಿದ್ದರೂ ಅದನ್ನು ಬೇರು ಸಮೇತ ಕಿತ್ತೆಸೆಯಲು ಪ್ರಯತ್ನಿಸಬೇಕು. ಬಲಹೀನತೆ ಪ್ರಾರಂಭವಾಗುವುದೆ ಭಯದಿಂದ. ಹೀಗಾಗಿ ನಿರ್ಭಯದಿಂದ ಬಾಳುವುದನ್ನು ಹೆತ್ತವರು ಕಲಿಸಬೇಕು.

ಭಯ ಭ್ರಾಂತಿಗೆ ಸಿಲಿಕಿಸುತ್ತದೆ: ಒಮ್ಮೆ ಮನಸ್ಸು ಬಲಹೀನಗೊಂಡರೆ ಮುಗಿಯಿತು. ದುರ್ಬಲ ಮನಸ್ಸು ಅತಿರೇಕವೆನಿಸುವಷ್ಟು ಭಯಗೊಂಡು ಭ್ರಾಂತಿಗೆ ಸಿಲುಕಿಕೊಳ್ಳುತ್ತದೆ. ವಾಸ್ತವತೆಯ ಅರಿವನ್ನೆ ಕಳೆದುಕೊಂಡು ಬಿಡುತ್ತದೆ. ಯಾವುದೆ ವಾಸ್ತವಿಕತೆಗಿಂತ ನಾವು ಅದರ ಬಗ್ಗೆ ಹೊಂದಿರುವ ಮನೋಭಾವ ಮುಖ್ಯವಾಗಿದೆ. ಏಕೆಂದರೆ ಸಫಲತೆಯನ್ನು ಮತ್ತು ವಿಫಲತೆಯನ್ನು ನಿರ್ಣಯಿಸುವುದು ನಮ್ಮ ಮನೋಭಾವ. ವಾಸ್ತವ ಪ್ರಪಂಚದಿಂದ ದೂರ ನಡೆಯಲು ಪ್ರಾರಂಭಿಸಿದರೆ ಗೆಲುವು ದೂರ ಸರಿಯುತ್ತದೆ. ಆಗ ಪ್ರತಿ ಹೆಜ್ಜೆಯಲ್ಲಿಯೂ ಸೋಲನ್ನೆ ಹೊದ್ದು ಮಲಗಬೇಕಾಗುತ್ತದೆ. ಇದು ಮನುಷ್ಯನನ್ನು ಕಾಡಿ ಜೀವ ಹಿಂಡಿಬಿಡುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿ ಮಾನಸಿಕ ದೃಢತೆಯನ್ನು ಗಳಿಸಿಕೊಳ್ಳಲು ಹೊರಟರೆ ಬಲಹೀನತೆ ಪದೆ ಪದೆ ಅಡ್ಡಗಾಲು ಹಾಕುತ್ತದೆ. ಹಾಗೆಂದು ಪ್ರಯತ್ನ ಬಿಡುವಹಾಗಿಲ್ಲ. ದೇಹಕ್ಕೆ ಉತ್ತಮ ಆಹಾರ ಹೇಗೆ ಬೇಕೋ ಹಾಗೆಯೆ ಮನಸ್ಸಿಗೆ ಉತ್ತಮ ವಿಚಾರಗಳನ್ನು ಉಣಿಸಬೇಕು.

### ಬಲಹೀನತೆಯನ್ನು ಕೊಡವಿ ಎದ್ದು ನಿಲ್ಲಬೇಕು

ನಮ್ಮ ಶಕ್ತಿ ಏನು, ಬಲಹೀನತೆಗಳೇನು, ನಾವೇನು ಮಾಡಬಾರದು, ಹಾಗೆಯೆ ಏನು ಮಾಡಬಲ್ಲೆವು ಎಂಬುದನ್ನು ನಾವು ತಿಳಿದಿರಬೇಕು. ಜೀವನದಲ್ಲಿ ಯಶಸ್ಸನ್ನು ಗಳಿಸಿದವರು ತಮ್ಮ ಶಕ್ತಿ ಹಾಗು ಬಲಹೀನತೆಗಳನ್ನು ಅರಿತು ನಡೆದಿದ್ದರಿಂದ ಜಯಸಾಧಿಸಿದರು ಎನ್ನುವುದು ನೆನಪಿರಲಿ. ಒಮ್ಮೆ ಮನಸ್ಸು ಗಟ್ಟಿ ಮಾಡಿ ಬಲಹೀನತೆಯನ್ನು ಕೊಡವಿ ಎದ್ದು ನಿಂತರೆ ಸಾಕು ಬೇಕಾದ ರೀತಿಯಲ್ಲಿ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳುವ ಸಾಮರ್ಥ್ಯ, ಪ್ರತಿಭೆ, ಚತುರತೆ ಬರುತ್ತದೆ. ಅಂದರೆ ಅಸಹನೀಯ ಕಷ್ಟದ ಪರಿಸ್ಥಿತಿ ಇದ್ದಾಗಲೂ ಫೀನಿಕ್ಸ್ ಪಕ್ಷಿಯಂತೆ ಎದ್ದು ಬರುವಂತೆ ಮಾಡುವ ಶಕ್ತಿ ನೀಡುವುದು ಮಾನಸಿಕ ದೃಢತೆ ಮಾತ್ರ.


ಒಮ್ಮೆ ನಮ್ಮ ಅಂತರಂಗದ ಚೈತನ್ಯದ ಅರಿವು ಮೂಡಿದರೆ ಸಾಕು ಹಿಂದೆ ಬೀಳುವ ಮಾತೇ ಇಲ್ಲ. ಅಂತರಂಗದ ಬಲಹೀನತೆಯನ್ನು ದಾಟಿ ಎದ್ದು ನಿಲ್ಲಬೇಕೆಂದು ದೃಢ ನಿರ್ಧಾರ ಮಾಡಿ ಪ್ರಯತ್ನಿಸಿದರೆ ಸಾಕು ವಾಸ್ತವ ಲೋಕಕ್ಕೆ ಮರಳಿ ನಿರುತ್ಸಾಹದ ಮುದ್ದೆಯಂತಿದ್ದವನು ಚಿಮ್ಮುವ ಚಿಲುಮೆಯಾಗುತ್ತಾನೆ. ಒಮ್ಮೆ ಮಾನಸಿಕ ದೃಢತೆಯನ್ನು ಸಾಧಿಸಿದರೆ ಅದು ಸಮಯದ ಸದುಪಯೋಗವನ್ನು ತಾನಾಗಿಯೆ ಅರಿತು ರೂಢಿಸಿಕೊಳ್ಳುವಂತೆ ಮಾಡುತ್ತದೆ. ಕೆಲಸದ ಶಕ್ತಿಯನ್ನು ಹೆಚ್ಚಿಸುತ್ತದೆ. ಬಲಹೀನ ವ್ಯಕ್ತಿ ಮಾಡುವ ಕೆಲಸಕ್ಕಿಂತ ಹೆಚ್ಚು ಕೆಲಸವನ್ನು ಅದೇ ಸಮಯದಲ್ಲಿ ದೃಢತೆ ಸಾಧಿಸಿದವನು ಮಾಡಿ ಮುಗಿಸುತ್ತಾನೆ. ಏಕೆಂದರೆ ಬಲಹೀನತೆಯಲಿ ತೊಳಲಾಡುವ ವ್ಯಕ್ತಿಯ ಮನಸ್ಸು ಚಿತ್ತಚಾಂಚಲ್ಯದಿಂದ ಕೂಡಿರುತ್ತದೆ. ಅವನಿಗೆ ಏಕಾಗ್ರತೆಯಿಂದ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ದೃಢತೆಯುಳ್ಳವನ ಕೆಲಸದಲ್ಲಿ ಉತ್ತಮ ಗುಣಮಟ್ಟ ಎದ್ದು ಕಾಣುವುದಲ್ಲದೆ ಅವನ ಸಕಾರಾತ್ಮಕ ಧೋರಣೆ ಇತರರ ನಡುವೆ ಎದ್ದು ಕಾಣುವಂತೆ ಮಾಡುತ್ತದೆ.

### ವಿವೇಕದಿಂದ ಸಮಸ್ಯೆ ಪರಿಹಾರ

ಅಧೈರ್ಯದಿಂದ ಇದ್ದರೆ ಕಷ್ಟಗಳು ನಮ್ಮನ್ನು ಬಿಡದ ಭೂತದಂತೆ ಕಾಡುತ್ತದೆ. ಧೈರ್ಯದಿಂದ ಎದುರಿಸಿದರೆ ತಾವಾಗಿಯೆ ಓಡುತ್ತವೆ. ಭಯದ ಕ್ಷಣಗಳು ಎದುರಾದಾಗ ಮೈ ಮರೆತರೆ ಸಾಕು ಬಲಹೀನತೆ ಬಲವಾಗಿ ವಕ್ರಿಸಿಕೊಳ್ಳುತ್ತದೆ. ಭಯದ ಕ್ಷಣದಲ್ಲಿ ಮನಸ್ಸನ್ನು ಉದ್ವೇಗಕ್ಕೆ, ಆತಂಕಕ್ಕೆ ಎಡೆಮಾಡದೆ ಮನಸ್ಸನ್ನು ಉದ್ವೇಗ ರಹಿತ ಸ್ಥಿತಿಯಲ್ಲಿಟ್ಟುಕೊಂಡು ಯೋಚಿಸಿದಾಗ ಸಮಸ್ಯೆ ದೊಡ್ಡದಾಗಿ ಕಾಣುವುದಿಲ್ಲ, ವಿವೇಕದಿಂದ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಮರ್ಕಟ ಮನಸ್ಸು ಹೇಳುವುದನ್ನು ಮಾಡುವುದಕ್ಕಿಂತ ಬುದ್ಧಿ ಹೇಳುವುದನ್ನು ಪಾಲಿಸಬೇಕು.

### ದೃಢತೆಯಿಂದ ಜಯ

ಬಲಹೀನತೆಯಿದ್ದವನ ಬಳಿ ಜಯ ಹತ್ತಿರವೂ ಸುಳಿಯುವುದಿಲ್ಲ. ಬಲಹೀನತೆಯ ಮನಃಸ್ಥಿತಿಯಲ್ಲಿ ನಕಾರಾತ್ಮಕತೆಯೆ ರಾರಾಜಿಸುತ್ತಿರುತ್ತದೆ. ನಕಾರಾತ್ಮಕವಾದ,



ನನ್ನಿಂದಾಗದು ಎಂಬ ಭಾವವನ್ನು ತೊರೆದು ಹೊರಗೆ ಬರಬೇಕು. ಆಗ ಜಗವೆ ಸುಂದರವಾಗಿ ಕಂಗೊಳಿಸುತ್ತದೆ. ನಾನು ಬಡವ ನನ್ನಷ್ಟು ಕಷ್ಟ ಯಾರಿಗೂ ಇಲ್ಲ ಎಂದು ಕೊರಗುತ್ತಾ ಕೂರುವ ಬದಲು ನಮಗಿಂತ ಹೆಚ್ಚಿನ ಕಷ್ಟದಲ್ಲಿದ್ದು ಏನನ್ನಾದರು ಸಾಧಿಸಿದವರನ್ನು ಮಾದರಿಯಾಗಿಟ್ಟುಕೊಳ್ಳಬೇಕು. ಕೀಳರಿಮೆ, ದುಃಖ, ಭಯ, ಚಿಂತೆ, ಬೇಸರ ಸೋಮಾರಿತನದಂತಹ ನಕಾರಾತ್ಮಕ ಭಾವಗಳನ್ನು ಒಂದು ಬಾರಿ ದೃಢಮನಸ್ಸಿನಿಂದ ಒದ್ದು ಓಡಿಸಿಬಿಟ್ಟರೆ ಆಗ ಜೀವನವೆಲ್ಲ ಸಕಾರಾತ್ಮಕವಾಗಿ ಮನಸ್ಸಿನಲ್ಲಿ ಸಂತಸ ಮನೆ ಮಾಡುತ್ತದೆ. ದುಃಖವನ್ನು ದೂರತಳ್ಳಿ ಮನಸಾರೆ ಒಮ್ಮೆ ನಕ್ಕು ಬಿಟ್ಟರೆ ಮನದ ಗೊಂದಲಗಳಿಗೆಲ್ಲಾ ಸಕಾರಾತ್ಮಕ ಮನೋಭಾವ ಉತ್ತರಿಸುತ್ತದೆ. ಮಾನಸಿಕ ದೃಢತೆಯನು ಸಾಧಿಸಿದರೆ ಸಂತೋಷ, ಸಂತೃಪ್ತಿ, ಸಮೃದ್ಧಿಗೆ ಕೊನೆಯೇ ಇಲ್ಲ. ನಕಾರಾತ್ಮಕತೆಯನ್ನು ದೂರತಳ್ಳಿ ದೃಢತೆಯನ್ನು ಅಪ್ಪಿಕೊಳ್ಳಿ ಯಶಸ್ಸು ನಿಮ್ಮದಾಗಿಸಿಕೊಳ್ಳಿ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248